# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು

**ಹೆಚ್.ಆರ್.ಸಿ.ನಂ: 1422/10/2/2018(B-2)**

**ದಿನಾಂಕ: 21/01/2020**

**ಉಪಸ್ಥಿತರು:**

**ಶ್ರೀ.ಕೆ.ಬಿ.ಚಂಗಪ್ಪ, ಮಾನ್ಯ ಸದಸ್ಯರು**

**ಅಭಿಪ್ರಾಯ, ವರದಿ ಮತ್ತು ಶಿಫಾರಸ್ಸು**

1. ಈ ದೂರರ್ಜಿಯನ್ನು ಬೆಳಗಾವಿಯ ಪೊಲೀಸ್ ಆಯುಕ್ತರು, ಪೊಲೀಸ್ ಉಪ ಆಯುಕ್ತರು, ಮತ್ತು ಇನ್ನಿತರ ಪೊಲೀಸ್ ಸಿಬ್ಬಂದಿಗಳ ಮೇಲೆ ಕಾನೂನು ಕ್ರಮಕೈಗೊಳ್ಳಲು ಸಲ್ಲಿಸಲಾಗಿರುತ್ತದೆ.

2. ದೂರರ್ಜಿಯ ಸಂಕ್ಷಿಪ್ತ ವಿವರವೇನೆಂದರೆ, ದಿ:27- –03–2018 ರಂದು ಬೆಳಗ್ಗೆ 8.00 ಘಂಟೆಗೆ ದೂರರ್ಜಿದಾರರು ಎ.ಪಿ.ಎಂ.ಸಿ. ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ಸಿವಿಲ್ ಆಸ್ಪತ್ರೆಯ ರೋಗಿಗಳಿಗೆ ಟೀ ಮತ್ತು ಲಘು ಉಪಹಾರ ನೀಡಲು ಹೋಗುತ್ತಿದ್ದಾಗ ತೌಸೀಫ್ ಅಲ್ವಾಡ್ಕರ್, ಅಬ್ಬುಮುಲ್ಲ ಮತ್ತು ಇನ್ನಿತರರು ದೂರರ್ಜಿದಾರರು ಮಹಿಳೆಗೆ ಮೋಸ ಮಾಡಿರುತ್ತಾರೆಂದು ನೆಪ ಮಾಡಿಕೊಂಡು ಉದ್ದೇಶ ಪೂರ್ವಕವಾಗಿ ದೂರರ್ಜಿದಾರರ ಬಟ್ಟೆಯನ್ನು ಕಳಚಿ ಅವರ ಮೇಲೆ ಹಲ್ಲೆ ನಡೆಸಿ, ಅವರ ಮೈಮೇಲೆ ಕಪ್ಪು ಬಣ್ಣ ಬಳಿದು, ಬೆದರಿಕೆ ಹಾಕಿ, ಅವರನ್ನು ಅರೆಬೆತ್ತಲೆಯಾಗಿ ಬಲವಂತದಿಂದ ರಾಣಿಕಿತ್ತೂರು ಚನ್ನಮ್ಮ ಸರ್ಕಲ್ ಮೂಲಕ ವಿಭಾಗೀಯ ಆಯುಕ್ತರವರ ಕಾಂಪೌಡ್‌ವರೆಗೆ ಕರೆದುಕೊಂಡು ಹೋಗಿ ಅವರ ಮೇಲೆ ಹಲ್ಲೆ ನಡೆಸಿದ ಬಗ್ಗೆ ದೂರರ್ಜಿದಾರರು ದೂರನ್ನು ಪೊಲೀಸ್ ಉಪ ಆಯುಕ್ತರು ಮತ್ತು ಪೊಲೀಸ್ ಆಯುಕ್ತರಿಗೆ ನೀಡಿದರು ಸಹ ಸಂಬಂಧಪಟ್ಟ ಪೊಲೀಸರು ಯಾವುದೇ ಕ್ರಮಕೈಗೊಂಡಿಲ್ಲವೆಂಬುದಾಗಿರುತ್ತದೆ.

3. ದೂರರ್ಜಿಯ ಪ್ರತಿಯನ್ನು ಪೊಲೀಸ್ ಮಹಾನಿರೀಕ್ಷಕರು, ಉತ್ತರ ವಲಯ, ಬೆಳಗಾವಿ ಇವರಿಗೆ ಕಳುಹಿಸಿ ವಿಷಯ ಕುರಿತು ವಿಚಾರಣೆ ನಡೆಸಿ ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸಲು ಸೂಚಿಸಿದ ಪ್ರಕಾರ ಆರಕ್ಷಕ ಮಹಾನೀರಿಕ್ಷಕರು, ಉತ್ತರ ವಲಯ, ಬೆಳಗಾವಿ ರವರು ದೂರರ್ಜಿಯ ಬಗ್ಗೆ ಸ್ವತ: ವಿಚಾರಣೆ ಮಾಡಿ ಆಯೋಗಕ್ಕೆ ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಿರುತ್ತಾರೆ.

*"ಅರ್ಜಿದಾರರಾದ ಶ್ರೀ ಮಹ್ಮದ ರಫೀಕ ಬಾಬಾಸಾಹೇಬ ದೇಸಾಯಿ ಇವರ ಮೇಲೆ ಎದುರುದಾರರಾದ 1) ತೌಸಿಫ್ ಅಲ್ವಾಡಕರ, 2) ಅಬುಮುಲ್ಲಾ 3) ಇಮ್ತಿಯಾಜ ಅಹ್ಮದ 4) ಜಮೀಲಾಬಿ ನಬ್ಬುವಾಲೆ ಹಾಗೂ ಇತರರು ಹಲ್ಲೆ ಮಾಡಿ ಮಾನವ ಹಕ್ಕುಗಳ ಉಲ್ಲಂಘನೆ ಮಾಡಿರುವ ಬಗ್ಗೆ ಈಗಾಗಲೇ*

*ಮು.ತಿ.ನೋ.*

ಬೆಳಗಾವಿ ನಗರದ ಎ.ಪಿ.ಎಂ.ಸಿ. ಪೊಲೀಸ್ ಠಾಣೆಯಲ್ಲಿ ಮೊ.ಸಂ:98/2018 ಕಲಂ 143, 147, 341, 342, 323, 324, 504, 506, 355 ಸಹಕಲಂ 149 ಐ.ಪಿ.ಸಿ. ಅನ್ವಯ ಪ್ರಕರಣ ದಾಖಲಾಗಿ ಬೆಳಗಾವಿ ನಗರದ ಮಾರ್ಕೆಟ್ ಠಾಣೆಗೆ ಪ್ರಕರಣವು ವರ್ಗಾವಣೆಯಾಗಿ ತನಿಖೆಯಲ್ಲಿರುತ್ತದೆ.

ಸದರಿ ಪ್ರಕರಣವನ್ನು ಪಿ.ಐ., ಎ.ಪಿ.ಎಂ.ಸಿ. ಠಾಣೆ ರವರು ದಿ:09-04-2018 ರಂದು ಸಮುಚಿತ ಮಾರ್ಗದಲ್ಲಿ ಮಾರ್ಕೆಟ್ ಠಾಣೆಗೆ ವರ್ಗಾಯಿಸಿದ್ದು, ಅದು ಎ.ಸಿ.ಪಿ., ಮಾರ್ಕೆಟ್ ಉಪ ವಿಭಾಗ ಹಾಗೂ ಪೊಲೀಸ್ ಆಯುಕ್ತಾಲಯದ ಮುಖಾಂತರ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ದಿ:30/04/2018 ರಂದು ಸ್ವೀಕೃತವಾಗಿರುತ್ತದೆ. ಈ ಪ್ರಕ್ರಿಯೆಯಲ್ಲಿ ವಿನಾಕಾರಣ 21 ದಿನ ಕಾಲಹರಣವಾಗಿರುತ್ತದೆ. ಅಲ್ಲದೆ ಪಿ.ಐ. ಮಾರ್ಕೆಟ್ ಠಾಣೆರವರು 34 ದಿನಗಳ ವಿಳಂಬ ಮಾಡಿ ದಿ:04/06/2018 ರಂದು ಪ್ರಕರಣ ದಾಖಲು ಮಾಡಿಕೊಂಡಿರುತ್ತಾರೆ. ಹೀಗೆ ಒಟ್ಟು 55 ದಿನ ಪ್ರಕರಣದಲ್ಲಿ ಯಾವುದೇ ರೀತಿಯ ತನಿಖೆ ನಡೆದಿರುವುದಿಲ್ಲ.

ಪಿ.ಐ, ಮಾರ್ಕೆಟ್ ಠಾಣೆರವರು ಘಟನಾ ಸ್ಥಳಗಳಿಗೆ ಭೇಟಿ ನೀಡಿರುವುದಿಲ್ಲ ಮತ್ತು ಪ್ರಕರಣವನ್ನು 34 ದಿನ ವಿಳಂಬ ಮಾಡಿ ದಾಖಲಿಸಿಕೊಂಡಿರುತ್ತಾರೆ ಹಾಗೂ ಇದುವರೆಗೂ ಪ್ರಕರಣದಲ್ಲಿ ಭಾಗಿಯಾದ ಇನ್ನುಳಿದ ಆರೋಪಿತರ ನ್ನು ಬಂಧಿಸಿ ಕಾನೂನು ಕ್ರಮಕೈಗೊಂಡಿರುವುದಿಲ್ಲ. ಈ ಮೂಲಕ ತನಿಖೆಯನ್ನು ಪೂರ್ಣಗೊಳಿಸುವ ಬಗ್ಗೆ ಕ್ರಮ ವಹಿಸದೆ ತನಿಖೆಯಲ್ಲಿ ಉದಾಸೀನತೆ ತೋರಿಸಿರುವುದು ಕಂಡುಬಂದಿರುತ್ತದೆ.

ಎ.ಸಿ.ಪಿ., ಮಾರ್ಕೆಟ್ ಉಪವಿಭಾಗರವರು ಮಾರ್ಕೆಟ್ ಠಾಣೆಯ ತಕ್ಷಣದ ಮೇಲಾಧಿಕಾರಿಗಳಿದ್ದು, ಮಾನವ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಂತಹ ಗಂಭೀರ ಪ್ರಕರಣವಾಗಿದ್ದರಿಂದ ಈ ಪ್ರಕರಣವನ್ನು ಇನ್ನೂ ಹೆಚ್ಚಿನ ಕಾಳಜಿ ವಹಿಸಿ ಮಾರ್ಕೆಟ್ ಠಾಣೆಯಲ್ಲಿ ಕೂಡಲೇ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಳ್ಳುವಂತೆ ನೋಡಿ ಕೊಳ್ಳಬೇಕಾಗಿತ್ತು. ಒಟ್ಟಾರೆಯಾಗಿ ಸದರಿ ಪ್ರಕರಣವು ಮಾನವ ಹಕ್ಕುಗಳ ಘೋರ ಉಲ್ಲಂಘನೆಯ ಪ್ರಕರಣವಾಗಿದ್ದು, ಸದರಿ ಪ್ರಕರಣದ ತನಿಖೆಯನ್ನು ಗಂಭೀರವಾಗಿ ಪರಿಗಣಿಸಿ ಪರಿಣಾಮಕಾರಿಯಾಗಿ ಕ್ರಮ ಕೈಕೊಳ್ಳಬೇಕಾಗಿತ್ತು. ಆದರೆ, ಈ ಬಗ್ಗೆ ಫಿರ್ಯಾದಿಯ ಪರವಾಗಿ ಸಂಘಟನೆಯವರು ಪೊಲೀಸ್ ಆಯುಕ್ತರು, ಬೆಳಗಾವಿ ನಗರರವರ ಕಛೇರಿಗೆ ಮನವಿ ಪತ್ರ ಸಲ್ಲಿಸಿದ್ದಾಗ್ಯೂ ಸಹ ಪ್ರಕರಣದ ತನಿಖೆಯನ್ನು ಪರಿಣಾಮಕಾರಿಯಾಗಿ ನಡೆಸದೇ ಇರುವುದು ಕಂಡುಬರುತ್ತದೆ" ಎಂದು ವರದಿ ಮಾಡಿರುತ್ತಾರೆ.

4. ದೂರರ್ಜಿ ಮತ್ತು ಪೊಲೀಸ್ ಮಹಾನಿರೀಕ್ಷಕರು, ಉತ್ತರ ವಲಯ, ಬೆಳಗಾವಿ ರವರ ವರದಿಯನ್ನು ಪರಿಶೀಲಿಸಿದಾಗ ದೂರರ್ಜಿದಾರರ ಮಾನವ ಹಕ್ಕಿನ ಉಲ್ಲಂಘನೆಯಾಗಿದ್ದರು ಸಹ ಆ ಬಗ್ಗೆ ಕಾನೂನು ಕ್ರಮಕೈಗೊಳ್ಳದೆ ಆಗಿನ ಬೆಳಗಾವಿಯ 1) ಎ.ಪಿ.ಎಂ.ಸಿ. ಪೊಲೀಸ್ ಠಾಣೆಯ ಪಿ.ಐ. ಶ್ರೀ. ರಮೇಶ್ ಹೆಚ್ ಹನಾಪುರ, 2)ಬೆಳಗಾವಿ ಮಾರ್ಕೆಟ್ ಠಾಣೆಯ ಪಿ.ಐ., ಶ್ರೀ ಪ್ರಶಾಂತ್ ಎಸ್, ಹಾಗೂ 3) ಬೆಳಗಾವಿ ಮಾರ್ಕೆಟ್

ಮು.ತಿ.ನೋ.

ಉಪವಿಭಾಗದ ಎ.ಸಿ.ಪಿ., ಶ್ರೀ ವಿನಯ್ ಅನಂತ್ ಗಾಂವಕರ್ ರವರುಗಳು ಕರ್ತವ್ಯದಲ್ಲಿ ನಿರ್ಲಕ್ಷತನ ತೋರಿರುವುದು ಕಂಡುಬಂದ ಕಾರಣ ಅವರುಗಳ ಮೇಲೆ ಏಕೆ ಶಿಸ್ತುಕ್ರಮ ತೆಗೆದುಕೊಳ್ಳುವ ಬಗ್ಗೆ ಮತ್ತು ದೂರರ್ಜಿದಾರರಿಗೆ ಪರಿಹಾರ ನೀಡುವ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಬಾರದು ಎಂಬುದರ ಬಗ್ಗೆ ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ 1993 ಕಲಂ 16 ರಡಿಯಲ್ಲಿ ನೋಟೀಸ್ ನೀಡಲಾಗಿದ್ದು, ಸದರಿ ನೋಟೀಸಿಗೆ ಬೆಳಗಾವಿಯ ಎ.ಪಿ.ಎಂ.ಸಿ. ಪೊಲೀಸ್ ಠಾಣೆಯ ಪಿ.ಐ., ಶ್ರೀ.ರಮೇಶ್ ಹೆಚ್. ಹನಾಪುರ ಮತ್ತು ಬೆಳಗಾವಿ ಮಾರ್ಕೆಟ್ ಉಪವಿಭಾಗದ ಎ.ಸಿ.ಪಿ. ಶ್ರೀ ವಿನಯ್ ಅನಂತ್ ಗಾಂವಕರ್ ರವರು ತಮ್ಮ ಅಭಿಪ್ರಾಯವನ್ನು ಸಲ್ಲಿಸಿ, ತಾವು ಕರ್ತವ್ಯದಲ್ಲಿ ಉದಾಸೀನತೆ ಅಥವಾ ನಿರ್ಲಕ್ಷತನ ತೋರಿಸಿರುವುದಿಲ್ಲ. ಘಟನೆಯ ಬಗ್ಗೆ ಕಾನೂನಿನ ಪ್ರಕಾರ ಪ್ರಕರಣ ದಾಖಲು ಮಾಡಿಕೊಂಡು ನಂತರ ಅದನ್ನು ಮಾರ್ಕೆಟ್ ಪೊಲೀಸ್ ಠಾಣೆಗೆ ಮುಂದಿನ ಕ್ರಮದ ಬಗ್ಗೆ ವರ್ಗಾವಣೆ ಮಾಡಲಾಗಿರುತ್ತದೆ. ಅಲ್ಲದೆ, ಬೆಳಗಾವಿ ಮಾರ್ಕೆಟ್ ಉಪವಿಭಾಗದ ಎ.ಸಿ.ಪಿ., ಶ್ರೀ ವಿನಯ್ ಅನಂತ್ ಗಾಂವಕರ್ ರವರು ತಮ್ಮ ಅಭಿಪ್ರಾಯದಲ್ಲಿ ತಾನು ತನ್ನ ಕೆಳಗಿನ ಅಧಿಕಾರಿಗಳಿಗೆ ಆರೋಪಿತರ ಮೇಲೆ ಕ್ರಮಕೈಗೊಳ್ಳುವ ಬಗ್ಗೆ ಸೂಕ್ತ ನಿರ್ದೇಶನವನ್ನು ಲಿಖಿತ ರೂಪದಲ್ಲಿ ನೀಡಿರುತ್ತೇನೆ. ಅಲ್ಲದೆ, ಶ್ರೀ. ಪ್ರಶಾಂತ್ ಎಸ್, ಪೊಲೀಸ್ ನಿರೀಕ್ಷಕರು, ಮಾರ್ಕೆಟ್ ಪೊಲೀಸ್ ಠಾಣೆ, ಬೆಳಗಾವಿಯಲ್ಲಿ ಕರ್ತವ್ಯ ನಿರ್ವಹಿಸುವಾಗ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತನ ತೋರಿಸುವ ಸ್ವಭಾವದವರಾಗಿರುತ್ತಾರೆ. ಆದುದರಿಂದ ಈ ಘಟನೆಯ ನಂತರ ಬೇರೆಯೊಂದು ಪ್ರಕರಣದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ನಿಯಂತ್ರಿಸುವ ಸಮಯದಲ್ಲಿ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷ್ಯ ತೋರಿಸಿದ್ದರಿಂದ ಆತನು ಅಮಾನತ್ತುಗೊಂಡು ಇಲಾಖಾ ವಿಚಾರಣೆಗೆ ಗುರಿಯಾಗಿರುತ್ತಾರೆಂದು ತಮ್ಮ ಅಭಿಪ್ರಾಯವನ್ನು ಆಯೋಗಕ್ಕೆ ಸಲ್ಲಿಸಿರುತ್ತಾರೆ.

5. ಶ್ರೀ. ಪ್ರಶಾಂತ್ ಎಸ್., ಪೊಲೀಸ್ ನಿರೀಕ್ಷಕರು, ಮಾರ್ಕೆಟ್ ಪೊಲೀಸ್ ಠಾಣೆ, ಬೆಳಗಾವಿ ರವರು ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ 1993 ಕಲಂ 16 ರಡಿಯಲ್ಲಿ ನೀಡಿದ ನೋಟೀಸ್ ನೊಂದಾಯಿತ ಅಂಚೆ ಮೂಲಕ ಜಾರಿಯಾಗಿದ್ದರೂ ಸಹ ಪೊಲೀಸ್ ಮಹಾನಿರೀಕ್ಷಕರು, ಉತ್ತರ ವಲಯ, ಬೆಳಗಾವಿ ರವರ ವರದಿಗೆ ತಮ್ಮ ಆಕ್ಷೇಪ/ಅಭಿಪ್ರಾಯವನ್ನು ಸಲ್ಲಿಸಿರುವುದಿಲ್ಲ.

6. ದೂರರ್ಜಿ, ಪೊಲೀಸ್ ಮಹಾನಿರೀಕ್ಷಕರು, ಉತ್ತರ ವಲಯ, ಬೆಳಗಾವಿ ರವರ ವರದಿ, ಬೆಳಗಾವಿಯ ಎ.ಪಿ.ಎಂ.ಸಿ. ಪೊಲೀಸ್ ಠಾಣೆಯ ಪಿ.ಐ., ಶ್ರೀ.ರಮೇಶ್ ಹೆಚ್. ಹನಾಪುರ ಮತ್ತು ಬೆಳಗಾವಿ ಮಾರ್ಕೆಟ್ ಉಪವಿಭಾಗದ ಎ.ಸಿ.ಪಿ. ಶ್ರೀ ವಿನಯ್ ಅನಂತ್ ಗಾಂವಕರ ರವರ ಅಭಿಪ್ರಾಯ/ಆಕ್ಷೇಪ ಮತ್ತು ದಾಖಲೆಗಳ ಪ್ರತಿಯನ್ನು ಪರಿಶೀಲಿಸಿದಾಗ, ದಿನಾಂಕ 27-03-2018 ರಂದು ಬೆಳಗ್ಗೆ 8.00 ಘಂಟೆಗೆ ದೂರರ್ಜಿದಾರರು ಎ.ಪಿ.ಎಂ.ಸಿ. ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ಬೆಳಗಾವಿಯ ಸಿವಿಲ್ ಆಸ್ಪತ್ರೆಗೆ ರೋಗಿಗಳಿಗೆ ಉಚಿತವಾಗಿ ಟೀ ಮತ್ತು ಲಘು ಉಪಹಾರ ನೀಡಲು ಹೋಗುತ್ತಿದ್ದಾಗ ದೂರರ್ಜಿದಾರರು ಬೆಳಗಾವಿ ಶಾಸಕನ ಬಗ್ಗೆ ಅಪಪ್ರಚಾರ ಮಾಡಿರುತ್ತಾರೆ ಎಂದು ತೌಸೀಫ್ ಅಲ್ವಾಡ್ಕರ್ ಮತ್ತು ಇನ್ನಿತರರು ದೂರರ್ಜಿದಾರರ ಮೇಲೆ ಹಲ್ಲೆ ನಡೆಸಿ ಬೆಳಗಾವಿ ನಗರದ ಮಧ್ಯಭಾಗದಲ್ಲಿ ಅರೆಬೆತ್ತಲೆ ಮಾಡಿ, ಅವರನ್ನು ಬಲವಂತವಾಗಿ ರಾಣಿಕಿತ್ತೂರು ಚೆನ್ನಮ್ಮ

*ಮು.ತಿ.ನೋ.*

ಸರ್ಕಲ್ ಮೂಲಕ ವಿಭಾಗೀಯ ಆಯುಕ್ತರವರ ಕಛೇರಿ ಕಾಂಪೌಂಡ್‌ನವರೆಗೆ ಎಳೆದುಕೊಂಡು ಹೋಗಿ ಅವರನ್ನು ಕಟ್ಟಿಹಾಕಿ ಮಹಿಳೆಯರಿಗೆ ಮೋಸ ಮಾಡಿರುತ್ತಾನೆಂದು ನೆಪ ಮಾಡಿಕೊಂಡು ಅವರಿಗೆ ಅವಮಾನ ಮಾಡಿರುವ ಘಟನೆಯು ಬೆಳಗಾವಿ ನಗರದ ಮಧ್ಯಭಾಗದಲ್ಲಿ ನಡೆದಿದ್ದರೂ ಸಹ ಕಾನೂನು ಸುವ್ಯವಸ್ಥೆಯನ್ನು ಪಾಲಿಸಬೇಕಾದ ಬೆಳಗಾವಿ ಎ.ಪಿ.ಎಂ.ಸಿ. ಪೊಲೀಸ್ ಠಾಣೆಯ ಪಿ.ಐ., ಶ್ರೀ ರಮೇಶ್ ಹೆಚ್ ಹನಾಪುರರವರಾಗಲೀ ಅಥವಾ ಪ್ರಕರಣ ವರ್ಗಾವಣೆಯಾದ ನಂತರ ಮಾರ್ಕೆಟ್ ಪೊಲೀಸ್ ಠಾಣೆಯ ಠಾಣಾಧಿಕಾರಿಕಾದ ಶ್ರೀ. ಪ್ರಶಾಂತ್‌ರವರಾಗಲೀ ಘಟನೆಯನ್ನು ತಡೆಯುವ ಬಗೆಯಾಗಲೀ ಅಥವಾ ಆರೋಪಿತರನ್ನು ಕೂಡಲೇ ದಸ್ತಗಿರಿ ಮಾಡುವ ಬಗೆಯಾಗಲೀ ಕ್ರಮ ತೆಗೆದುಕೊಂಡಿರುವುದು ಕಂಡುಬರುವುದಿಲ್ಲ.

7. ಘಟನೆಯು ದಿನಾಂಕ 27-03-2018 ರಂದು ಬೆಳಗಾವಿಯ ಎ.ಪಿ.ಎಂ.ಸಿ. ಪೊಲೀಸ್ ಠಾಣೆಯ ವ್ಯಾಪ್ತಿದಲ್ಲಿ ಬೆಳಗ್ಗೆ 8.00 ಘಂಟೆಗೆ ನಡೆದಿದ್ದು ಸದರಿ ಪ್ರಕರಣವನ್ನು ಬೆಳಗ್ಗೆ 10.30 ಘಂಟೆಗೆ ದಾಖಲು ಮಾಡಿ ಕೊಂಡಿದ್ದರೂ ಸಹ ಎ.ಪಿ.ಎಂ.ಸಿ. ಪೊಲೀಸ್ ಠಾಣೆಯ ಪಿ.ಐ., ರವರು ಆರೋಪಿತರನ್ನು ಕೂಡಲೇ ದಸ್ತಗಿರಿ ಮಾಡಿ ಕಾನೂನಿಗೆ ಒಪ್ಪಿಸಲು ಪ್ರಯತ್ನಪಟ್ಟಿರುವುದಿಲ್ಲ. ಇದಲ್ಲದೆ, ಪ್ರಕರಣದ ಬಗ್ಗೆ ಕೂಡಲೇ ಸೂಕ್ತ ಕ್ರಮಕೈಗೊಳ್ಳದೆ ವಿನಾಕಾರಣ 21 ದಿನ ತಡ ಮಾಡಿ ದಿನಾಂಕ 09-04-2018 ರಂದು ಮಾರ್ಕೆಟ್ ಠಾಣೆಗೆ ವರ್ಗಾಯಿಸಿದ್ದು, ನಂತರ ಮಾರ್ಕೆಟ್ ಠಾಣೆಯಲ್ಲಿ 34 ದಿನಗಳ ವಿಳಂಬ ಮಾಡಿ ದಿನಾಂಕ 04-06-2018 ರಂದು ಪ್ರಕರಣವನ್ನು ಮರುದಾಖಲು ಮಾಡಿಕೊಳ್ಳಲಾಗಿರುತ್ತದೆ. ಅಂದರೆ ಒಟ್ಟು 55 ದಿನ ಪ್ರಕರಣದಲ್ಲಿ ಯಾವುದೇ ರೀತಿಯ ತನಿಖೆಯು ನಡೆದಿರುವುದಿಲ್ಲ. ಘಟನೆಯು ಎ.ಪಿ.ಎಂ.ಸಿ. ಪೊಲೀಸ್ ಠಾಣೆಯ ವ್ಯಾಪ್ತಿಗೆ ಒಳಪಡದಿದ್ದ ಪಕ್ಷದಲ್ಲಿ ಅದನ್ನು ಕೂಡಲೇ ಸಂಬಂಧಪಟ್ಟ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಿ ಸೂಕ್ತಕ್ರಮಕ್ಕೆ ಸೂಚಿಸಬಹುದಾಗಿತ್ತು. ಆದರೆ, ಪ್ರಕರಣದ ತನಿಖಾಧಿಕಾರಿಯಾದ ಶ್ರೀ ರಮೇಶ್ ಹೆಚ್ ಹನಾಪುರ ರವರು ಮತ್ತು ಶ್ರೀ. ಪ್ರಶಾಂತ್ ಎಸ್ ರವರು ಉದ್ದೇಶಪೂರ್ವಕವಾಗಿ ಯಾವುದೋ ಒತ್ತಡಕ್ಕೆ ಒಳಗಾಗಿ ಆರೋಪಿತರ ಮೇಲೆ ಸುಮಾರು 55 ದಿನಗಳವರೆಗೆ ಯಾವುದೇ ಕ್ರಮವನ್ನು ಕೈಗೊಳ್ಳದೆ ಆಗಿನ ಎ.ಪಿ.ಎಂ.ಸಿ. ಪೊಲೀಸ್ ಠಾಣೆಯ ಪಿ.ಐ., ಶ್ರೀ. ರಮೇಶ್ ಹೆಚ್. ಹನಾಪುರ ಮತ್ತು ಮಾರ್ಕೆಟ್ ಠಾಣೆಯ ಶ್ರೀ. ಪ್ರಶಾಂತ್ ಎಸ್ ರವರುಗಳು ಕರ್ತವ್ಯದಲ್ಲಿ ನಿರ್ಲಕ್ಷತನ ತೋರಿ ದೂರರ್ಜಿದಾರರ ಮಾನವ ಹಕ್ಕಿನ ಉಲ್ಲಂಘನೆಯಾಗಲು ಕಾರಣಕರ್ತರಾಗಿರುತ್ತಾರೆಂಬುದು ಪೊಲೀಸ್ ಮಹಾನಿರೀಕ್ಷಕರು, ಉತ್ತರ ವಲಯ, ಬೆಳಗಾವಿ ರವರ ವರದಿಯಿಂದ ಕಂಡುಬರುತ್ತದೆ. ಆದರೆ, ಶ್ರೀ. ವಿನಯ್ ಅನಂತ್ ಗಾಂವಕರ್, ಬೆಳಗಾವಿ ನಗರದ ಮಾರ್ಕೆಟ್ ಠಾಣೆಯ ಸಹಾಯಕ ಪೊಲೀಸ್ ಆಯುಕ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ 27-03-2018 ರಂದು ಘಟನೆಯ ಬಗ್ಗೆ ವರ್ತಮಾನ ಬಂದ ನಂತರ ಘಟನೆಯ ಸ್ಥಳಕ್ಕೆ ಹೋಗಿ ನಂತರ ಎ.ಪಿ.ಎಂ.ಸಿ. ಪೊಲೀಸ್ ಠಾಣೆಗೆ ಹೋಗಿ ಪ್ರಕರಣ ದಾಖಲಾಗಿರುವುದನ್ನು ಪರಿಶೀಲಿಸಿ ಆಪಾದಿತರ ಮೇಲೆ

*ಮು.ತಿ.ನೋ.*

ಕ್ರಮಕೈಗೊಳ್ಳಲು ಸಂಬಂಧಪಟ್ಟ ಪೊಲೀಸ್ ಠಾಣೆಯ ಅಧಿಕಾರಿಗಳಿಗೆ ಸೂಚಿಸಿರುವುದು ಸದರಿಯವರ ಅಭಿಪ್ರಾಯ ಹಾಗೂ ದಾಖಲೆಗಳಿಂದ ವ್ಯಕ್ತವಾಗುತ್ತದೆ. ಆದ್ದರಿಂದ ಈ ಕೆಳಕಂಡಂತೆ 'ಅಭಿಪ್ರಾಯ, ವರದಿ ಮತ್ತು ಶಿಫಾರಸ್ಸು ಮಾಡಲಾಗಿದೆ.

1. *ಆಗಿನ ಎ.ಪಿ.ಎಂ.ಸಿ. ಪೊಲೀಸ್ ಠಾಣೆಯ ಪಿ.ಐ., ಶ್ರೀ. ರಮೇಶ್ ಹೆಚ್. ಹನಾಪುರ ಮತ್ತು ಮಾರ್ಕೆಟ್ ಠಾಣೆಯ ಶ್ರೀ. ಪ್ರಶಾಂತ್ ಎಸ್ ಇವರುಗಳು ದೂರುದಾರರಾದ ಶ್ರೀ. ಮೊಹಮ್ಮದ್ ರಫೀಕ್ ದೇಸಾಯಿ ರವರ ಸ್ವಾತಂತ್ರ್ಯ ಮತ್ತು ಘನತೆಗೆ ಧಕ್ಕೆ ಉಂಟು ಮಾಡಿ ಅವರ ಮಾನವ ಹಕ್ಕಿನ ಉಲ್ಲಂಘನೆ ಮಾಡಿರುವುದು ರುಜುವಾತು ಆಗಿರುವುದರಿಂದ ದೂರರ್ಜಿದಾರರಿಗೆ ರೂ. 20,000/-(ಇಪ್ಪತ್ತು ಸಾವಿರ ರೂಪಾಯಿ) ಗಳನ್ನು ಪರಿಹಾರ ರೂಪದಲ್ಲಿ ಒಂದು ತಿಂಗಳೊಳಗಾಗಿ ಸರ್ಕಾರದಿಂದ ನೀಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಲಾಗಿದೆ ಮತ್ತು ಈ ಪ್ರಕರಣದ ಘಟನೆಯ ಬಗ್ಗೆ ಇಲಾಖಾ ವಿಚಾರಣೆಯಾದ ನಂತರ ವಿಚಾರಣೆಯ ತೀರ್ಪಿಗೊಳಪಟ್ಟು ಎ.ಪಿ.ಎಂ.ಸಿ. ಪೊಲೀಸ್ ಠಾಣೆಯ ಪಿ.ಐ., ಶ್ರೀ. ರಮೇಶ್ ಹೆಚ್. ಹನಾಪುರ ಮತ್ತು ಮಾರ್ಕೆಟ್ ಠಾಣೆಯ ಶ್ರೀ. ಪ್ರಶಾಂತ್ ಎಸ್ ರವರುಗಳ ವೇತನದಿಂದ ತಲಾ ರೂ. 10,000/- ರಂತೆ ಪರಿಹಾರ ನೀಡಿದ ಹಣವನ್ನು ವಸೂಲಿ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸತಕ್ಕದ್ದು.*
2. *ಎ.ಪಿ.ಎಂ.ಸಿ. ಪೊಲೀಸ್ ಠಾಣೆಯ ಪಿ.ಐ., ಶ್ರೀ. ರಮೇಶ್ ಹೆಚ್. ಹನಾಪುರ ಮತ್ತು ಮಾರ್ಕೆಟ್ ಠಾಣೆಯ ಶ್ರೀ. ಪ್ರಶಾಂತ್ ಎಸ್ ಇವರ ಮೇಲೆ ನಿಯಮಾನುಸಾರ ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ದೂರರ್ಜಿ ಮತ್ತು ಇತರೆ ದಾಖಲೆಗಳನ್ನು ಪರಿಗಣಿಸಿ, ದೋಷಾರೋಪಣಾವನ್ನು ರಚಿಸಿ, ಉಭಯ ಪಕ್ಷದವರಿಗೂ ಅವಕಾಶ ನೀಡಿ, ಇಲಾಖಾ ವಿಚಾರಣೆ ನಡೆಸಬೇಕೆಂದು ಪೊಲೀಸ್ ಮಹಾನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರು, ಬೆಂಗಳೂರು ರವರಿಗೆ ಅಭಿಪ್ರಾಯ/ ಶಿಫಾರಸ್ಸು ಮಾಡಲಾಗಿದೆ ಮತ್ತು ಇಂತಹ ಪ್ರಕರಣಗಳು ಮರುಕಳಿಸದಂತೆ, ಪೊಲೀಸರಿಗೆ ಸಾರ್ವಜನಿಕರ ಮಾನವ ಹಕ್ಕಿನ ಬಗ್ಗೆ ಸೂಕ್ತವಾಗಿ ಜಾಗೃತಗೊಳಿಸುವ ಬಗ್ಗೆ ಕ್ರಮಕೈಗೊಳ್ಳತಕ್ಕದ್ದು.*

8. ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳೊಳಗೆ ಅನುಪಾಲನಾ ವರದಿಯನ್ನು ಅಪರ ಮುಖ್ಯ ಕಾರ್ಯದರ್ಶಿಗಳು ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ಕಲಂ 22 ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993ರ ನಿಯಮಾನುಸಾರ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಿ ಈ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

ಸಹಿ/-
(ಕೆ.ಬಿ.ಚಂಗಪ್ಪ)
ಸದಸ್ಯರು.

ಹೆಚ್ ಪಿ